156	ಹರಪ್ಪನಹಳ್ಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹರಪ್ಪನಹಳ್ಳಿ	ದಾವಣಗೆರೆ
157	ಚನ್ನಗಿರಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚನ್ನಗಿರಿ	ದಾವಣಗೆರೆ
158	ಜಗಳೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಜಗಳೂರು	ದಾವಣಗೆರೆ
159	ಹೊನ್ನಾಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊನ್ನಾಳಿ	ದಾವಣಗೆರೆ

500(1143) : ಶ್ರೀ ಯೋಗಿಶ್ವರ್ ಭಟ್. ಎನ್(ಮಂಗಳೂರು) ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ರಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳೇನು?

ಆ) ಈ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಬರುವ ಕಾಮಗಾರಿಗಳು ಯಾವಾಗ ಆರಂಭವಾಯಿತು; ಅವು ಯಾವುವು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಇವುಗಳಿಗೆ ಬಿಡುಗಡೆಯಾಗಬೇಕಾದ ರಾಜ್ಯ ಮತ್ತು ಕೇಂದ್ರದ ಹಣ ಎಷ್ಟು?

ಈ) ಬಿಡುಗಡೆ ಆಗಿದ್ದಲ್ಲಿ (ಯಾವಾಗ ಬಿಡುಗಡೆಯಾಗಿದೆ) ಎಷ್ಟು ಹಣ ಬಿಡುಗಡೆಯಾಗಿದೆ?

ಉ) ಬಿಡುಗಡೆಯಾಗದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ರಯ ಅಭಿವೃದ್ಧಿ ಸಚಿವರು): ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ' ರನ್ ವೆ ' ನಿರ್ಮಾಣ ಕಾರ್ಯವನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (AAI) (ಎಎಐ) ಸಂಸ್ಥೆಯವರು ಕೈಗೆತ್ತಿಕೊಂಡಿರುತ್ತಾರೆ. ಅಗತ್ಯವಿರುವ ಜಮೀನನ್ನು ಒದಗಿಸುವುದು ಕರ್ನಾಟಕ ಸರ್ಕಾರದ ಜವಾಬ್ದಾರಿಯಾಗಿದ್ದು, ಈ ಬಾಬ್ತು ಈಗಾಗಲೇ ರೂ. 11.00 ಕೋಟಿಗಳನ್ನು ಖರ್ಚು ಮಾಡಿದೆ. ಭೂಮಿ ಸಮತಟ್ಟು ಮಾಡುವಿಕೆ ಇತ್ಯಾದಿ ಕಾಮಗಾರಿಗಳು ನಡೆಯುತ್ತಿವೆ. ಇದನ್ನು ಹೊರತುಪಡಿಸಿ, AAI ಸಂಸ್ಥೆಯವರು ಹೊಸ ಟರ್ಮಿನಲ್ ಹಾಗೂ ಇತರೆ ಸೌಲಭ್ಯಗಳನ್ನು ನಿರ್ಮಿಸಲು ಕೇಳಿರುವ 158 ಎಕರೆ ಹೆಚ್ಚುವರಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಒದಗಿಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸುಮಾರು ರೂ. 10.50 ಕೋಟಿ ಖರ್ಚಾಗುವುದು. ಕೇಂದ್ರ ಸರ್ಕಾರವು ಈ ಕಾಮಗಾರಿಗಾಗಿ ಅಗತ್ಯವಿರುವ ಹಣವನ್ನು ನೇರವಾಗಿ ಸ್ಥಳೀಯ AAI ಅಧಿಕಾರಿಗಳಿಗೆ ಒದಗಣೆ ಮಾಡುತ್ತಿದೆ.

501(1144) : ಶ್ರೀ ಯೋಗೀಶ್ ಭಟ್. ಎನ್ (ಮಂಗಳೂರು) ಮಾನ್ಯ ಮಾನ್ಯ ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಶೇಷ ಆರ್ಥಿಕ ವಲಯ ಅಭಿವೃದ್ಧಿ ಕಾಯಗಳು ಯಾವ ಹಂತದಲ್ಲಿದೆ?

ಆ) ಬಂಡವಾಳ ಹೊಡಿಲು ಹಾಗೂ ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಇದರ ಫಲಿತಾಂಶ ಎನು?

ಇ) ಈ ಬಗ್ಗೆ ಒ.ಎನ್.ಜಿ.ಸಿ. ಸಂಸ್ಥೆ ಯಾವ ಯೋಜನೆಗಳನ್ನು ಹಾಗೂ ಎಷ್ಟು ಬಂಡವಾಳ ಹೊಡಲು ಒಪ್ಪಂದ ಮಾಡಲಾಗಿದೆ (Special Econimic Zone)

ಈ) ಈ ಒಪ್ಪಂದ ಅನುಷ್ಟಾನಕ್ಕೆ ತರಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು; ಅದರಿಂದ ಆಗುವ ಲಾಭಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೆ. ಕೆನರಾ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ರವರು ಕರಾವಳಿ ವಿಶೇಷ ಆರ್ಥಿಕ ವಲಯ ಪ್ರಸ್ತಾವನೆಗೆ ರಾಜ್ಯ ಸರ್ಕಾರದ ಶಿಫಾರಿಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ತಾತ್ವಿಕ ಅನುಮೋದನೆ ನೀಡಿದೆ. ಈ ಯೋಜನೆಯನ್ನು ಖಾಸಗಿ ಬಂಡವಾಳ ಹೂಡಿಕೆದಾರರ ಸಹಯೋಗದೊಂದಿಗೆ ಕಾರ್ಯಗತಗೂಳಿಸಬೇಕಾಗಿದೆ.

ಆ) ಮೆ. ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ ರವರು ಮಂಗಳೂರಿನಲ್ಲಿ ನೈಸರ್ಗಿಕ ಅನಿಲ ಆಮದು ಸ್ಥಾವರ ಹಾಗೂ ಇತರೆ ಬೃಹತ್ ಪೆಟ್ರೋ ಕೆಮಿಕಲ್ ಸ್ಥಾವರಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದ ಹಿನ್ನೆಲೆಯಲ್ಲಿ ಮಂಗಳೂರಿನ ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಯಲ್ಲಿ ಪಾಲುದಾರಿಕೆ ಪಡೆಯುವ ಇಚ್ಚೆಯನ್ನು ವ್ಯಕ್ತಪಡಿಸಿದ್ದಾರೆ. ಆದರಂತೆ ಕರಾವಳಿ ವಿಶೇಷ ಆರ್ಥಿಕ ಯೋಜನೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಮೆ. ಕೆನರಾ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ , ಮೆ.ಒ.ಎನ್.ಜಿ.ಸಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಡುವೆ ಒಂದು ಒಪ್ಪಂದಕ್ಕೆ ದಿ: 30.8.2004 ರಂದು ಸಹಿ ಮಾಡಲಾಗಿದೆ ಹಾಗೂ ಯೋಜನೆಯ ಅನುಷ್ಟಾನಕ್ಕಾಗಿ ಪೂರ್ವಭಾವಿ ಸಿದ್ದತೆಗಳನ್ನು ನಡೆಸಲಾಗಿದೆ.

ಇ) ಕರಾವಳಿ ವಿಶೇಷ ಆರ್ಥಿಕ ವಲಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ಸ್ಥಾಪಿಸುವ ಮೆ.ಒ.ಎನ್.ಜಿ.ಸಿ / ಎಮ್.ಆರ್.ಪಿ.ಎಲ್. ರವರು ಪ್ರಸ್ತಾವನೆಗಳಿಗೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯು ಒಪ್ಪಿಗೆ ನೀಡಿದೆ.

ಕ್ರ. ಸಂ	ಯೋಜನೆ	ಉದ್ದೇಶಿತ ಬಂಡವಾಳ
1	ಪೆಟ್ರೋ ಕೆಮಿಕಲ್ ಮತ್ತು ಆರೋಮ್ಯಾಟಿಕ್ಸ್ ಘಟಕ	7475.00
2	ಅನಿಲ ಆಧಾರಿತ 2000 MW ಶಾಖೋತ್ಪನ್ನ ವಿದ್ಯುತ್ ಘಟಕ	8594.50
3	ನೈಸರ್ಗಿಕ ಅನಿಲ ರಿ–ಗ್ಯಾಸಿಪಿಕೇಷನ್ ಘಟ್ಟಕ	3950.00
4	ಮಂಗಳೂರು – ಹಾಸನ – ಬೆಂಗಳೂರು ನೈಸರ್ಗಿಕ ಅನಿಲ ಸಾಗಾಣಿಕೆ ಪೈಪೈಲೈನ್ ಘಟಕ	945.00
	ಒಟ್ಟು	**20964.50**

ಈ) ಕರಾವಳಿ ವಿಶೇಷ ಆರ್ಥಿಕ ವಲಯ ಸೇರಿದಂತೆ ರಾಜ್ಯದಲ್ಲಿ ಸ್ಥಾಪಿಸಲ್ಪಡುವ ಎಲ್ಲಾ ವಿಶೇಷ ಆರ್ಥಿಕ ವಲಯಗಳಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ ಸರ್ಕಾರವು ಆದೇಶ ಕ್ರಮ ಸಂಖ್ಯೆ 202 ಎಸ್.ಪಿ.ಟಿ 2001 ದಿ : 25.2.2002 ರಲ್ಲಿ ರಾಜ್ಯದ ವಿಶೇಷ ಆರ್ಥಿಕ ವಲಯ ನೀತಿಯನ್ನು ಘೋಷಿಸಿದೆ. ಈ ನೀತಿಯಡಿಯಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆ ಮತ್ತು ಅಂತಹ ವಲಯಗಳಲ್ಲಿ ಸ್ಥಾಪಿಸಲ್ಪಡುವ ಕೈಗಾರಿಕಾ ಘಟಕಗಳಿಗೆ ಮೂಲಭೂತ ಸೌಕರ್ಯ, ವಾಣಿಜ್ಯ ತೆರಿಗೆ ವಿನಾಯಿತಿ, ಕಾರ್ಮಿಕ ಖಾಯ್ದೆಗಳ ಸರಳೀಕೃತ ಅನುಷ್ಠಾನ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಯಿಂದಾಗಿ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಫ್ತು ವಹಿವಾಟು ಹೆಚ್ಚಿಸುವ ಹಾಗೂ ಉದ್ಯೋಗವಕಾಶ ಹೆಚ್ಚಿಸುವ ನಿರೀಕ್ಷೆಯಿದೆ.

502(1145) : ಶ್ರೀ ಯೋಗೀಶ್ ಭಟ್. ಎನ್.(ಮಂಗಳೂರು) ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಮಾನ ನಿಲ್ದಾಣ ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿ ಇವೆ ಪೂರ್ಣಗೊಳಿಸಲು ತಗಲುವ ವೆಚ್ಚ ಎಷ್ಟು ಹಾಗೂ ಅವದಿ ಎಷ್ಟು?

ಆ) ಕೇಂದ್ರ ಹಗೂ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು? ಯಾವಾಗ ಮಾಡಲಾಗಿದೆ? ಬಾಕಿಯಿರುವ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಇ) ಮಂಗಳೂರು–ಹಾಸನ ರೈಲ್ವೆ ಬ್ರಾಡ್ಗೇಜ್ ಕನ್ವರ್ಷನ್ ಕಾಮಗಾರಿಗಳ ಪೂರ್ಣಗೊಳಿಸಲು, ರಾಜ್ಯ ಸರಕಾರ ಬಿಡುಗಡೆ ಮಾಡಬೇಕಾದ ಹಣ ಎಷ್ಟು; ಯಾವಾಗ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ರನ್ ವೇ ನಿರ್ಮಾಣ ಕಾರ್ಯವನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ(ಎಎಐ) ಸಂಸ್ಥೆಯವರು ಕೈಗೆತ್ತಿಕೊಂಡಿರುತ್ತಾರೆ. ಎರಡನೇ ರನ್‌ವೇ ಕಾಮಗಾರಿಗೆ ಕರ್ನಾಟಕ ರಾಜ್ಯ ಸರ್ಕಾರವು ಸುಮಾರು 11.00 ಕೋಟಿ ರೂ. ಗಳನ್ನು ಭೂಸ್ವಾಧೀನ ಹಾಗೂ ಪುನರ್ವಸತಿ ಕೆಲಸಗಳಿಗಾಗಿ ಖರ್ಚು ಮಾಡಿದೆ ಉಳಿದೆಲ್ಲ ಖರ್ಚುಗಳನ್ನು AAI ಸಂಸ್ಥೆಯು ಭರಿಸಲಿದೆ ರೂ. 11 ಕೋಟಿಗಳನ್ನು ಖರ್ಚು ಮಾಡಿದೆ. ಎರಡನೇ ರನ್ ವೇ ಕಾರ್ಯಾ ಡಿಸೆಂಬರ್ 2005ರ ಹೊತ್ತಿಗೆ ಪೂರ್ಣಗೊಳ್ಳುವ ಸಂಭವವಿದೆ.

ಇ) ಹಾಸನ – ಮಂಗಳೂರು ಗೇಜ್ ಪರಿವರ್ತನೆ ಯೋಜನೆಯ ಕಾಮಗಾರಿಯ ಒಟ್ಟು ವೆಚ್ಚ ರೂ. 291 ಕೋಟಿ ಆಗಿರುತ್ತದೆ. ಈ ಬಗ್ಗೆ ಸ್ಥಾಪನೆಗೊಂಡಿರುವ ಹೆಚ್.ಎಂ.ಆರ್.ಡಿ.ಸಿ (HMRDC)ಯ ಷೇರುದಾರರ ಒಪ್ಪಂದದನ್ವಯ ರಾಜ್ಯ ಸರ್ಕಾರವು ರೂ. 45 ಕೋಟಿ ಈಕ್ವಿಟಿ ನೀಡಬೇಕಾಗಿದೆ. ಈಗಾಗಲೇ ರೂ. 28 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯ ಚಟುವಟಿಕೆಗಳು ಬಿರುಸಿನಿಂದ ಸಾಗಿರುತ್ತದೆ. 2005ನೇ ಸಾಲಿನ ಮದ್ಯದಲ್ಲಿ ಈ ಮಾರ್ಗವು ಪೂರ್ಣಗೊಳ್ಳುವ ಗುರಿ ಇದೆ 2004–05ನೇ ಸಾಲಿನ ಪೂರಕ ಅನುದಾನದಲ್ಲಿ ರೂ. 17 ಕೋಟಿಗಳ ಮೊತ್ತವನ್ನು ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.